ಅಪ್ಪ ತನ್ನ ಅನುಮಾನದಿಂದಲೇ ಸತ್ತ. ಇಲ್ಲದಿದ್ದರೆ ಇನ್ನೊಂದಷ್ಟು ವರ್ಷ ತಮ್ಮ ರಾಜ್ಯಭಾರ ನಡೆಯುತ್ತಿತ್ತು" ಎಂದು ವಿಶ್ವೇಶ್ವರನಿಗೆ ಅನಿಸುತ್ತಿದ್ದರೂ 'ತನ್ನ ಚೆಲ್ಲಾಟದ ಹರಕು ಬುದ್ಧಿಯೇ ಅಪ್ಪನಿಗೆ ಮೃತ್ಯುವಾಯ್ತು' ಎನ್ನುವ ಸತ್ಯವೂ ಮುಳ್ಳಿನಂತೆ ಅಂತರಂಗವನ್ನು ಚುಚ್ಚುತ್ತಿತ್ತು. ಒಳಮುರಿಗೆಗಳೇನೂ ಗೊತ್ತಿಲ್ಲದ ಫಣಿಯಮ್ಮ, "ಊರು ಉಪಕಾರ ಅರೀದು, ಹೆಣ ಶೃಂಗಾರ ಅರೀದು ಅಂತ ಸುಮ್ನೆ ಹೇಳ್ತಾರಾ? ನಿಮ್ಮಪ್ಪ ದೇವರ ಸೇವೆ ಅಂತ ಜೀವ ತೇಯ್ದಿದ್ದೇ ಬಂತು. ಅವರ ಜಾಗ ನಿನಗೆ ಇಲ್ಲ ಅಂದ್ರೆ ಏನರ್ಥ? ಇಷ್ಟು ವರ್ಷ ಸೇವೆ ಮಾಡಿಸ್ಕೊಂಡ ಮಾರುತಿ ಕಣ್ಣು ಮುಚ್ಕೊಂಡು ಕೂತಿರ್ತಾನಾ? ನೋಡ್ತಿರು, ಮಾಡಿದ್ದೋರು ಉಣ್ತಾರೆ ಮಣೆಯಂತಾ ಕಡುಬು" ಎಂದು ಶಾಪಳಿಸುತ್ತಾ ನೆಟಿಗೆ ಮುರಿಯುತ್ತಿದ್ದರು. ಶನಿವಾರದ ದಿನ ತುರಿಸಿಕೊಳ್ಳಲು ಪುರುಸೊತ್ತಿಲ್ಲದಂತೆ ಕತ್ತೆ ಕೆಲಸ ಮಾಡುತ್ತಿದ್ದ ಗುಂಡಮ್ಮ ಆಕಳಿಸುತ್ತಾ, ತೂಕಡಿಸುತ್ತಾ ಮಧ್ಯಾಹ್ನ ಹೊತ್ತು ಕಳೆಯುವುದನ್ನು ಅಭ್ಯಾಸ ಮಾಡಿಕೊಂಡಳು.

★★★

'ಗೌರ್ಮೆಂಟಿಂದ ನೋಟಿಸು ಬಂದಿದೆ. ಸುಪ್ರೀಂ ಕೋರ್ಟಿನ ಆರ್ಡರಂತೆ. ದೇವಸ್ಥಾನ ಒಡೀತಾರಂತೆ' ಅನ್ನುವ ಗುಲ್ಲು ಊರಿಡೀ ಹರಡಿ ಆಸ್ತಿಕ ಜನರನ್ನು ಕಂಗಾಲಾಗಿಸಿಬಿಟ್ಟಿತು. ಪಂಚಾಯ್ತಿ ಪ್ರೆಸಿಡೆಂಟರೇ ಖುದ್ದು ಮಂಜೂರು ಮಾಡಿದ ಸ್ಥಳ. ಅನಧಿಕೃತ ಅಂದರೆ ಏನರ್ಥ? 'ಅದು ಹ್ಯಾಗೆ ದೇವಸ್ಥಾನ ಒಡೀತಾರೋ ನಾವೂ ನೋಡ್ತೀವಿ. ಮೊದಲು ನಮ್ಮ ಮೈಮೇಲೆ ಜೆ.ಸಿ.ಬಿ. ಹತ್ತಿಸ್ಬೇಕು. ಆಮೇಲೆ ದೇವಸ್ಥಾನ ಒಡೆಯೋ ಮಾತು' ಹೆಣ್ಣು, ಗಂಡೆಂಬ ಭೇದವಿಲ್ಲದೆ ಊರಿನ ಮುಕ್ಕಾಲು ಪಾಲು ಜನ ವೀರಾವೇಶದ ಮಾತಾಡಿದರು. 'ಸರ್ಕಾರಿ ಹೈಸ್ಕೂಲು ಕಟ್ಟಿಸೋದು ಯಾವ ರಾಯನ ಕಾಲಕ್ಕೋ? ಹಿರಿಯ ಪ್ರಾಥಮಿಕ ಶಾಲೆ ಅನ್ನಿಸ್ಕೊಂಡಿರೋದೇ ತಲೇ ಮೇಲೆ ಬೀಳೋ ಹಂಗಿದೆ. ಮೊದಲು ಅದು ರಿಪೇರಿ ಆಗ್ಲಿ...' ಪ್ರೆಸಿಡೆಂಟರು ಕಾರಣ ಕೇಳಿದವರಿಗೆ ಸಮಜಾಯಿಷಿ ಹೇಳಿದರು, ಉಗುಳು ನುಂಗಿಕೊಳ್ಳುತ್ತಾ...

★★★

ಯುದ್ಧ ಮಾಡದೆಯೇ ಸೈನ್ಯ ಶರಣಾದ ಹಾಗಾಯ್ತು. ಸುಳಿವೇ ಕೊಡದೆ ಒಂದು ಬೆಳ್ಳಂಬೆಳಗ್ಗೆ ಮಾರುತಿ ದೇವಸ್ಥಾನ ನೆಲಸಮವಾಯ್ತು. ಜನ ಕಣ್ಣುಜ್ಜಿಕೊಂಡು ಎಚ್ಚರಾಗುವ ಹೊತ್ತಿಗೆ ಎಲ್ಲಾ ಮುಗಿದೇ ಹೋಗಿತ್ತು. ವರ್ಷಗಟ್ಟಲೆ ಶ್ರದ್ಧಾಭಕ್ತಿಗಳಿಂದ ಪೂಜೆ ಮಾಡಿಸಿಕೊಂಡಿದ್ದ ಹನುಮ ಗುಡಿ ಎದುರಿನ ಬಯಲಲ್ಲಿ ಅನಾಥನಂತೆ ಉದ್ದುದ್ದ ಒರಗಿದ್ದ.


### ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.